ಒಂದು ದೇಶದಲ್ಲಿ ಅರಾಜಕತೆ ಉಂಟಾದಾಗಲೇ ಹೊರಗಿನ ಶತ್ರುಗಳು ಬಂದು ಮುತ್ತುವುದು. ನಮ್ಮ ಮನಸ್ಸನ್ನು ನಿಗ್ರಹಿಸಿ ಸದ್ಭಾವನೆಗಳನ್ನು ಪೋಷಿಸಿದರೆ ಆಗ ನಮಗೆ ನಾವೇ ಮಿತ್ರ ರಾಗುತ್ತೇವೆ. ನಿಜವಾಗಿ ಹೇಳಬೇಕೆಂದರೆ, ಮೊದಲು ನಮಗೆ ನಾವೇ ಶತ್ರುಗಳಾಗುತ್ತೇವೆ, ಅನಂತರವಷ್ಟೇ ಹೊರಗಿನ ಶತ್ರುಗಳು ನಮ್ಮನ್ನು ಗೆಲ್ಲುತ್ತಾರೆ. ಇದೇ ಕಾರಣದಿಂದ ಯುನೆಸ್ಕೋದ (UNESCO) ಪ್ರಸಿದ್ಧ ಹೇಳಿಕೆಯೊಂದು ಹೀಗೆ ಹೇಳುತ್ತದೆ: "ಮನುಷ್ಯರ ಮನಸ್ಸಿನೊಳಗೆಯೇ ಮೊದಲು ಯುದ್ಧವು ಪ್ರಾರಂಭವಾಗುವುದರಿಂದ ಮನುಷ್ಯರ ಮನಸ್ಸಿನೊಳಗೆ ಶಾಂತಿರಕ್ಷಣೆಯ ಕೆಲಸ ನಡೆಯಬೇಕಾಗಿದೆ" (since wars begin in the minds of men, it is in the minds of men that the defences of peace must be constructed). ಆಂಗ್ಲಭಾಷೆಯಲ್ಲಿ ಒಂದು ಸುಂದರ ಹೇಳಿಕೆಯಿದೆ: "ಸದ್ಭಾವನೆಯ ವ್ಯಕ್ತಿಗಳು ಯುದ್ಧದ ಬಗ್ಗೆ ಚರ್ಚಿಸುವುದಕ್ಕಿಂತ ಹೆಚ್ಚಾಗಿ ದುಷ್ಟಮನೋಭಾವದ ವ್ಯಕ್ತಿಗಳು ಶಾಂತಿಯ ಬಗ್ಗೆ ಚರ್ಚಿಸುವುದು ಹೆಚ್ಚು ಯುದ್ಧಗಳಿಗೆ ಕಾರಣವಾಗುತ್ತದೆ" (More wars are caused by bad tempered people seeking to discuss peace measures than by good tempered people seeking to discuss war measures.).

ಆನೆ, ಕುದುರೆ ಮುಂತಾದ ಪ್ರಾಣಿಗಳನ್ನು ನಿಗ್ರಹಿಸಿ ಪಳಗಿಸಿದರೆ ಅವುಗಳು ನಮಗೆ ಮಿತ್ರರಾಗಿ ಅನೇಕ ರೀತಿಯಲ್ಲಿ ಸಹಕರಿಸುತ್ತವೆ. ಹಾಗೆಯೇ ಇಂದ್ರಿಯಮನಸ್ಸುಗಳನ್ನು ಸರಿಯಾಗಿ ನಿಗ್ರಹಿಸಿದರೆ ಅವುಗಳು ನಮಗೆ ಮಿತ್ರರಾಗುತ್ತವೆ. ದೇಹರಕ್ಷಣೆಯ ವ್ಯವಸ್ಥೆಯೂ ನಮ್ಮ ದೇಹದೊಳಗೇ ಇದೆ. ಬಿಳಿಯ ರಕ್ತದ ಕಣಗಳನ್ನು ನಮ್ಮ ದೇಹವನ್ನು ರಕ್ಷಿಸುವ ಯೋಧರು ಎಂದು ಕರೆಯಬಹುದು. ಅವು ದೇಹವನ್ನು ರಕ್ಷಿಸುವ ಸೈನಿಕರಿದ್ದಂತೆ. ಕೆಲವೊಮ್ಮೆ ಸೈನಿಕರೇ ಸರ್ಕಾರದ ವಿರುದ್ಧ ದಂಗೆಯೆದ್ದು ಅರಾಜಕತೆಯನ್ನು ನಿರ್ಮಿಸುವುದುಂಟು. ಹಾಗೆಯೇ ದೇಹದಲ್ಲಿಯೇ ಉಂಟಾಗುವ ಒಂದು ವಿಧವಾದ ಕಾಯಿಲೆ ಇದೆ ಎಂದು ವೈದ್ಯರು ಹೇಳುತ್ತಾರೆ. ಆ ಸಂದರ್ಭದಲ್ಲಿ ರೋಗಿಯನ್ನು ರಕ್ಷಿಸುವುದು ಅತ್ಯಂತ ಕಠಿಣ. ಇದೇ ರೀತಿ ನಮ್ಮ ಮನಸ್ಸು, ಇಂದ್ರಿಯಗಳೇ ನಮಗೆ ಶತ್ರುಗಳಾದರೆ ನಮ್ಮ ಪರಿಸ್ಥಿತಿ ಅತ್ಯಂತ ಶೋಚನೀಯವಾಗುತ್ತದೆ.

ಇಂದ್ರಿಯ ಮನಸ್ಸುಗಳು ಎಷ್ಟೇ ನಮ್ಮ ವಶದಲ್ಲಿದ್ದರೂ ಅವುಗಳನ್ನು ಸಂಪೂರ್ಣವಾಗಿ ನೆಚ್ಚಿಕೊಳ್ಳುವಂತಿಲ್ಲ. ಯಾವುದೇ ಸಂದರ್ಭದಲ್ಲಿಯೂ ಅವುಗಳಿಂದ ನಮಗೆ ಹಾನಿಯುಂಟಾಗುವ ಸಾಧ್ಯತೆ ಇದ್ದೇ ಇದೆ. ಆದ್ದರಿಂದ ನಾವು ಒಂದು ಆಧ್ಯಾತ್ಮಿಕ ಆದರ್ಶವನ್ನು ಇಟ್ಟುಕೊಳ್ಳಬೇಕು. ಕೇವಲ ಆತ್ಮನಿಗ್ರಹವುಳ್ಳ ಯೋಗಿಗಳಿಗಿಂತಲೂ ಭಗವತ್‌ಶ್ರದ್ಧೆಯುಳ್ಳ ಯೋಗಿಯು ಸರ್ವಶ್ರೇಷ್ಠನೆಂದು ಶ್ರೀಕೃಷ್ಣನು ಹೇಳುತ್ತಾನೆ:

**ಯೋಗಿನಾಮಪಿ ಸರ್ವೇಷಾಂ ಮದ್ಗತೇನಾಂತರಾತ್ಮನಾ ।**
**ಶ್ರದ್ಧಾವಾನ್ ಭಜತೇ ಯೋ ಮಾಂ ಸ ಮೇ**
**ಯುಕ್ತತಮೋ ಮತಃ॥ (೬:೪೭)**

"ಯಾವನು ಶ್ರದ್ಧಾವಂತನೋ ಮತ್ತು ನನ್ನನ್ನು (ಪರಮಾತ್ಮನನ್ನು) ಹೊಂದಿರುವ ಮನಸ್ಸಿನಿಂದ ನನ್ನನ್ನು ಭಜಿಸುವನೋ, ಅವನು ಎಲ್ಲ ಯೋಗಿಗಳಿಗಿಂತಲೂ ಶ್ರೇಷ್ಠನೆಂಬುದು ನನ್ನ ಅಭಿಪ್ರಾಯ."

ರಫಿಕ್ ಎಂಬ ವ್ಯಕ್ತಿಯು ತುಂಬ ಪರೋಪಕಾರ ಬುದ್ಧಿಯುಳ್ಳವನು. ಆದರೆ ಅವನಲ್ಲಿ ತಾನು ಪರೋಪಕಾರಿಯೆಂಬ ಅಹಂಕಾರವಿತ್ತು. ಅವನು ಒಮ್ಮೆ ಕಾಡಿನಲ್ಲಿ ತನ್ನ ಪರಮಸಾಹಸವನ್ನು ಮೆರೆದ. ಹೆಬ್ಬಾವಿನ ಬಾಯಿಗೆ ತುತ್ತಾಗಿದ್ದ ಕರಡಿಯನ್ನು ಎಳೆದು ಅದರ ಪ್ರಾಣವನ್ನು ಉಳಿಸಿದ. ಆ ಕರಡಿಯು ಇವನಿಗೆ ಚಿರಋಣಿಯಾಗಿ ಉಳಿಯಿತು. ಯಾವಾಗಲೂ ಅವನ ಜೊತೆಯೇ ಇದ್ದುಕೊಂಡು ಅವನ ಸೇವೆ ಮಾಡುತ್ತಿತ್ತು. ಅವನು ನಿದ್ರಿಸುತ್ತಿರುವಾಗಲೂ ಅದು ಅವನ ಪಕ್ಕದಲ್ಲಿಯೇ ಇದ್ದು ಅವನನ್ನು ಎಲ್ಲ ಅಪಾಯಗಳಿಂದ ರಕ್ಷಿಸುತ್ತಿತ್ತು. ಒಮ್ಮೆ ಸಾಧುವೊಬ್ಬರು ರಫಿಕನು ಕರಡಿಯೊಡನೆ ಇರುವುದನ್ನು ಕಂಡು, "ಇಂತಹ ಮೂರ್ಖಪ್ರಾಣಿಗಳ ಸಹವಾಸ ಒಳ್ಳೆಯದಲ್ಲ. ಅವುಗಳಿಂದ ಯಾವಾಗಬೇಕಾದರೂ ತೊಂದರೆ ಉಂಟಾಗಬಹುದು" ಎಂದು ಬಹಳವಾಗಿ ಅವನಿಗೆ ಎಚ್ಚರಿಕೆ ನೀಡಿದರು. ಆದರೆ ರಫಿಕನಿಗೆ ನಂಬಿಕೆಯುಂಟಾಗಲಿಲ್ಲ. ಕರಡಿಯ ಸೇವೆಯನ್ನು ನೋಡಿ ಅವನ ಮನಸ್ಸು ಕರಗಿಹೋಗಿತ್ತು. ಅದನ್ನು ಬಿಟ್ಟುಬಿಡಲು ಅವನು ಸಿದ್ಧನಿರಲಿಲ್ಲ. ಸಾಧುವಿನ ಮಾತು ಅವನಿಗೆ ಸಾಧುವೆನಿಸಲಿಲ್ಲ. ಅವರು ಅಸಹಾಯಕರಾಗಿ ಹೊರಟುಹೋದರು. ಒಮ್ಮೆ ರಫಿಕನು ಮಲಗಿ ನಿದ್ರಿಸುತ್ತಿದ್ದನು. ಕರಡಿ ನಿಷ್ಠೆಯಿಂದ ಅವನ ನಿದ್ದೆಗೆ ಭಂಗ ಉಂಟಾಗದಿರಲೆಂದು ನೊಣಗಳನ್ನು ಓಡಿಸುತ್ತಿತ್ತು. ಆದರೆ ಎಷ್ಟೇ ಓಡಿಸಿದರೂ ಅವು ಅವನ ಮುಖದ ಮೇಲೆ ಮತ್ತೆ ಮತ್ತೆ ಬಂದು ಕುಳಿತುಕೊಳ್ಳುತ್ತಿದ್ದವು. ಈಗ ಕರಡಿಯ ಕೋಪ ನೆತ್ತಿಗೇರಿತು. ಈ ನೊಣಗಳನ್ನು ಕೊಂದೇಬಿಡಬೇಕೆಂದು ಅದು ನಿಶ್ಚಯಿಸಿತು. ತನ್ನ ಯಜಮಾನನನ್ನು ನೊಣಗಳಿಂದ ರಕ್ಷಿಸುವ ಪರಮೋದ್ದೇಶದಿಂದ ಒಂದು ಕಲ್ಲನ್ನು ಎತ್ತಿ ಬಲವಾಗಿ ನೊಣಗಳ ಮೇಲೆ ಅಪ್ಪಳಿಸಿತು. ಇದರ ಪರಿಣಾಮವಾಗಿ ರಫಿಕನ ತಲೆಯೊಡೆದು ಅವನು ಅಲ್ಲಿಯೇ ಮೃತಪಟ್ಟನು. ಹೀಗೆಯೇ ನಾವು ನಮ್ಮ ಇಂದ್ರಿಯಗಳನ್ನು, ಅವು ಎಷ್ಟೇ ನಮ್ಮ ವಶದಲ್ಲಿದ್ದರೂ, ಸಂಪೂರ್ಣ ನೆಚ್ಚಿಕೊಳ್ಳುವಂತಿಲ್ಲ. ನಾವು ಎಚ್ಚರ ತಪ್ಪಿದಾಗ ಅವು ತಮ್ಮ ಚೇಷ್ಟೆಯನ್ನು ಪ್ರಾರಂಭಿಸುತ್ತವೆ.

ಸ್ವಾಮಿ ವಿವೇಕಾನಂದರ ಉತ್ತೇಜಕ ನುಡಿಗಳೊಂದಿಗೆ ಈ ಬರಹವನ್ನು ಅಂತ್ಯಗೊಳಿಸೋಣ: "ಎದ್ದು ನಿಲ್ಲಿ! ಧೀರರಾಗಿ!... ನಿಮಗೆ ಬೇಕಾದ ಶಕ್ತಿ ಸಹಾಯಗಳೆಲ್ಲ ನಿಮ್ಮಲ್ಲೇ ಇವೆ. ಆದಕಾರಣ ನಿಮ್ಮ ಭವಿಷ್ಯವನ್ನು ನೀವೇ ನಿರ್ಮಿಸಿಕೊಳ್ಳಿ. ಕಳೆದುಹೋದದ್ದನ್ನು ಕುರಿತು ವ್ಯಥೆಪಡಬೇಡಿ. ಅನಂತ ಭವಿಷ್ಯ ನಿಮ್ಮೆದುರಿಗೆ ಇದೆ. ಪ್ರತಿಯೊಂದು ಮಾತು, ಆಲೋಚನೆ, ಕೆಟ್ಟ ಕೆಲಸ – ಇವು ರಕ್ಕಸರಂತೆ ನಿಮ್ಮ ಮೇಲೆ ಬೀಳಲು ಕಾಯ್ದುಕೊಂಡಿರುವಂತೆ, ಒಳ್ಳೆಯ ಆಲೋಚನೆ, ಒಳ್ಳೆಯ ಕಾರ್ಯ ಇವು ಸಾವಿರಾರು ದೇವದೂತರ ಶಕ್ತಿಯೊಂದಿಗೆ ನಿಮ್ಮನ್ನು ಎಂದೆಂದೂ ರಕ್ಷಿಸಲು ಕಾಯ್ದುಕೊಂಡಿವೆ ಎನ್ನುವುದು ಉತ್ತೇಜನಕಾರಿಯಾದ ಭರವಸೆ" (ವ್ಯಕ್ತಿತ್ವ ನಿರ್ಮಾಣ, ಪುಟ ೪೧,೪೨).

# ಶ್ರೀರಾಮಾನುಜರು - ಜೀವನ ಮತ್ತು ಸಾಧನೆ

ಎಚ್. ವಿ. ಸರೋಜ

**(ಹಿಂದಿನ ಸಂಚಿಕೆಯಿಂದ)**

## ಬ್ರಹ್ಮಸೂತ್ರ ಭಾಷ್ಯ ರಚನೆ

ರಾಮಾನುಜರು ತಾವು ಯಾಮುನಾಚಾರ್ಯರಿಗೆ ನೀಡಿದ್ದ ಮಾತನ್ನು ನೆನಪಿಸಿಕೊಂಡರು. "ವ್ಯಾಸರ ಬ್ರಹ್ಮಸೂತ್ರಗಳಿಗೆ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಕಾರ ಭಾಷ್ಯವನ್ನು ಬರೆಯುತ್ತೇನೆ" ಎಂಬುದೇ ಆ ಮಾತು. ಅದಕ್ಕಾಗಿ ಅವರಿಗೆ ಬೋಧಾಯನ ಎಂಬ ಮಹಾತ್ಮರು ಬ್ರಹ್ಮಸೂತ್ರಗಳಿಗೆ ರಚಿಸಿದ ವ್ಯಾಖ್ಯಾನವನ್ನು ಅಧ್ಯಯನ ಮಾಡುವ ಆವಶ್ಯಕತೆ ಇತ್ತು. ಆ ಗ್ರಂಥದ ಒಂದು ಪ್ರತಿ ಕಾಶ್ಮೀರದಲ್ಲಿತ್ತು. ಇನ್ನೆಲ್ಲೂ ಅದು ಸಿಕ್ಕುವ ಸಂಭವವಿರಲಿಲ್ಲ. ಸರಿ, ರಾಮಾನುಜರು ಮತ್ತು ಅವರ ಶಿಷ್ಯನಾದ ಕೂರೇಶ ಕಾಶ್ಮೀರಕ್ಕೆ ಹೊರಟೇಬಿಟ್ಟರು. ನಡೆದೇ ದಾರಿಯನ್ನು ಕ್ರಮಿಸಿದರು. ಹಲವು ತಿಂಗಳುಗಳಾದ ಮೇಲೆ ಕಾಶ್ಮೀರವನ್ನು ಸೇರಿದರು. ಅಲ್ಲಿನ ರಾಜಾಸ್ಥಾನದಲ್ಲಿದ್ದ ಪಂಡಿತರು ರಾಮಾನುಜರ ಪ್ರತಿಭೆಗೆ ಬೆರಗಾದರು. ಬೋಧಾಯನ ಗ್ರಂಥವನ್ನು ನೀಡುವಂತೆ ರಾಮಾನುಜರು ಆ ಪಂಡಿತರನ್ನು ಕೇಳಿಕೊಂಡರು. ಆದರೆ ಪಂಡಿತಮಂಡಲಿಯು ಅದಕ್ಕೆ ಒಪ್ಪಲೇ ಇಲ್ಲ; ಅದರ ಒಂದು ಪ್ರತಿಯನ್ನು ಮಾಡಿಕೊಳ್ಳಲೂ ಅವಕಾಶ ನೀಡಲಿಲ್ಲ. ಕಡೆಗೆ ಒಂದು ಸಲ ಓದುವುದಕ್ಕಾದರೂ ಅವಕಾಶ ನೀಡಿ ಎಂದು ರಾಮಾನುಜರು ಬೇಡಿಕೊಂಡರು. ಕಠಿಣವಾದ ಈ ಗ್ರಂಥವನ್ನು ಒಂದು ಸಲ ಓದಿ, ಏನು ತಾನೇ ಅರ್ಥಮಾಡಿಕೊಂಡಾರು ಎಂಬ ಅವಜ್ಞೆಯಿಂದ ಆ ಪಂಡಿತರು ಓದುವುದಕ್ಕೆ ಕೊಟ್ಟರು. ಪ್ರತಿದಿನವೂ ಕೂರೇಶ ಕೆಲಭಾಗಗಳನ್ನು ಆಚಾರ್ಯರಿಗೆ ಓದಿಹೇಳುತ್ತಿದ್ದನು. ರಾಮಾನುಜರು ಅದನ್ನು ಕೇಳಿಸಿಕೊಳ್ಳುತ್ತಿದ್ದರು. ಹೀಗೆ ಕೆಲವು ದಿನಗಳಾದ ನಂತರ ಗ್ರಂಥವನ್ನು ಪೂರ್ತಿ ಓದಿದ್ದಾಯಿತು. ಆದರೆ, ಆ ಪುಸ್ತಕವನ್ನು ಹಿಂದಿರಿಗಿಸುವಾಗ ಅವರಿಗೆ ತುಂಬ ದುಃಖವಾಯಿತು. ಕೂರೇಶನಿಗೆ ಗುರುಗಳ ದುಃಖದ ಕಾರಣ ಗೊತ್ತಾಯಿತು. ಆತನಿಗೆ ಪ್ರಚಂಡ ಸ್ಮರಣಶಕ್ತಿ. ಇಡೀ ಗ್ರಂಥವನ್ನು ನೆನಪಿನಿಂದಲೇ ಲಿಪಿಬದ್ಧಗೊಳಿಸಿದ. ಇದರಿಂದ ರಾಮಾನುಜರಿಗೆ ಅತ್ಯಂತ ಸಂತೋಷವಾಯಿತು. ಇಬ್ಬರೂ ಶ್ರೀರಂಗಕ್ಕೆ ಮರಳಿ ಬಂದರು. ರಾಮಾನುಜರು ಬ್ರಹ್ಮಸೂತ್ರ ಭಾಷ್ಯವನ್ನು ಹೇಳುವರು; ಕೂರೇಶನು ಅದನ್ನು ಬರೆದುಕೊಳ್ಳುವನು. ಅನುಮಾನ ಬಂದಕಡೆ ಬರೆಯುವುದನ್ನು ನಿಲ್ಲಿಸಿ, ಸಂದೇಹವನ್ನು ನಿವಾರಿಸಿಕೊಳ್ಳುವನು.



ಒಮ್ಮೆ ಒಂದು ತಾತ್ತ್ವಿಕ ವಿಚಾರದಲ್ಲಿ ಕೂರೇಶನಿಗೆ ಅನುಮಾನ ಬಂದಿತು. ಬರೆಯುವುದನ್ನು ನಿಲ್ಲಿಸಿಬಿಟ್ಟ. ಸ್ವಲ್ಪ ಹೊತ್ತು ಹಾಗೆಯೇ ಕಳೆಯಿತು. ಗುರುಗಳು ನೋಡುತ್ತಾರೆ, ಕೂರೇಶ ಬರೆದುಕೊಳ್ಳುತ್ತಲೇ ಇಲ್ಲ. ಅವರಿಗೆ ಬಹಳ ಸಿಟ್ಟುಬಂದು, ಎದ್ದು ಹೊರಟುಹೋದರು. ಸ್ವಲ್ಪ ಹೊತ್ತಾದ ನಂತರ ರಾಮಾನುಜರಿಗೆ ತಮ್ಮ ತಪ್ಪಿನ ಅರಿವಾಯಿತು. ಕೂರೇಶನ ಸಂಶಯವನ್ನು ಪರಿಹರಿಸದಿದ್ದರೆ ತಮ್ಮ ತತ್ತ್ವಪ್ರತಿಪಾದನೆಯೇ ಬೇರೆ ದಾರಿ ಹಿಡಿಯುತ್ತಿತ್ತು. ಇದನ್ನು ಕಂಡುಕೊಂಡ ಅವರು ಕೂರೇಶನನ್ನು ಪ್ರೀತಿಯಿಂದ ಆಲಿಂಗಿಸಿಕೊಂಡರು.

ಶ್ರೀಭಾಷ್ಯದ ರಚನೆ ಸಂಪನ್ನಗೊಂಡಿತು. ಈ ಸಾಧನೆಯಿಂದ, ರಾಮಾನುಜರಿಗೆ 'ಶ್ರೀಭಾಷ್ಯಕಾರರು' ಎಂಬ ಹೆಸರು ಪ್ರಾಪ್ತವಾಯಿತು.

ಇನ್ನುಮುಂದೆ ವಿಶಿಷ್ಟಾದ್ವೈತ ತತ್ತ್ವದ ಪ್ರಚಾರವಾಗಬೇಕು. ಅದರೊಂದಿಗೆ ತೀರ್ಥಯಾತ್ರೆಯೂ ನಡೆಯಲಿ ಎಂದು ರಾಮಾನುಜರು ನಿರ್ಧರಿಸಿದರು. ಶಿಷ್ಯರೊಂದಿಗೆ ಕಾಲ್ನಡಿಗೆಯಲ್ಲಿಯೇ ತಮ್ಮ ಪ್ರವಾಸವನ್ನು ಆರಂಭಿಸಿದರು. ಚೋಳಮಂಡಲ, ಪಾಂಡ್ಯಮಂಡಲಗಳನ್ನು ಸುತ್ತಿಬಂದರು. ಅನಂತರ ಉತ್ತರಭಾರತದ ಕಡೆಗೆ ಹೋದರು. ದ್ವಾರಕ, ಬೃಂದಾವನ, ಮಥುರಾ, ಬದರಿಕಾಶ್ರಮ ಇತ್ಯಾದಿ ಕ್ಷೇತ್ರಗಳನ್ನು ಸಂದರ್ಶಿಸಿದರು. ಕಡೆಗೆ ಕಾಶ್ಮೀರವನ್ನು ತಲುಪಿದರು. ಅಲ್ಲಿನ ಅಧಿದೇವತೆಯಾದ ಶಾರದಾದೇವಿ ರಾಮಾನುಜರಿಗೆ ದರ್ಶನ ನೀಡಿ, ಹಯಗ್ರೀವ ಮೂರ್ತಿಯನ್ನು ದಯಪಾಲಿಸಿದಳು. ಅನಂತರ, ರಾಮಾನುಜರು ಕಾಶಿ ನಗರವನ್ನು ಸಂದರ್ಶಿಸಿ, ಪುರಿ ನಗರವನ್ನು ತಲುಪಿದರು. ಅಲ್ಲಿ 'ಎಂಬಾರ್ ಮಠ' ಎಂದು ಪ್ರಸಿದ್ಧವಾದ ಒಂದು ಮಠವನ್ನು ಸ್ಥಾಪಿಸಿದರು. ಅಲ್ಲಿನ ಸುಪ್ರಸಿದ್ಧ ಜಗನ್ನಾಥ ದೇವಾಲಯದಲ್ಲಿದ್ದ ಪೂಜಾಕ್ರಮವನ್ನು ಸರಿಪಡಿಸಿದರು. ಹೀಗೆ ಭಾರತದಾದ್ಯಂತ ಧರ್ಮಪ್ರಚಾರ ಮಾಡಿ, ಶ್ರೀರಂಗಕ್ಕೆ ವಾಪಸ್ಸು ಬಂದರು.

## ಕರ್ನಾಟಕದಲ್ಲಿ ಶ್ರೀರಾಮಾನುಜರು

ಆಗಿನ ಕಾಲದಲ್ಲಿ ಕರಿಕಾಲ ಎನ್ನುವವನು ಚೋಳದೇಶವನ್ನು ಆಳುತ್ತಿದ್ದನು. ಶೈವನಾದ ಅವನಿಗೆ ಉದಾರ ಬುದ್ಧಿ ಇರಲಿಲ್ಲ. 'ಶಿವನಿಗಿಂತ ದೊಡ್ಡ ದೇವರಿಲ್ಲ' ಎನ್ನುವ ಪ್ರಕಟನೆಯನ್ನು ಆತ ಹೊರಡಿಸಿದ. ಅದಕ್ಕೆ ಎಲ್ಲರೂ ಸಹಿ ಮಾಡಬೇಕೆಂದು ಆಜ್ಞೆ ಮಾಡಿದ. ರಾಮಾನುಜರ ಕೈಯಲ್ಲಿ ಸಹಿ ಮಾಡಿಸಬೇಕೆಂದು ಯಾರೋ ಅವನಿಗೆ ಹೇಳಿಕೊಟ್ಟರು. ಕೂಡಲೇ ಬರಬೇಕೆಂದು ರಾಜ ರಾಮಾನುಜರಿಗೆ ಹೇಳಿಕಳಿಸಿದ. ರಾಜಭಟರು ಬಂದಾಗ ರಾಮಾನುಜರು ಸ್ನಾನಕ್ಕಾಗಿ ನದಿಯ ಕಡೆಗೆ ಹೋಗಿದ್ದರು. ಕೂರೇಶನಿಗೆ ಮುಂದೆ ಬರುವ ಅಪಾಯದ ಸುಳಿವು ಸಿಕ್ಕಿತು. ತನ್ನ ಗುರುಗಳನ್ನು ರಕ್ಷಿಸಬೇಕೆಂದು ಅವನು ತೀರ್ಮಾನಿಸಿದ. ಗುರುಗಳ ಕಾವಿಬಟ್ಟೆಯನ್ನು ತೊಟ್ಟುಕೊಂಡು, ಅವರ ದಂಡವನ್ನು ಕೈಯಲ್ಲಿ ಹಿಡಿದ. ತಾನೇ ರಾಮಾನುಜರೆನ್ನುವಂತೆ ನಟನೆ ಮಾಡಿದ. ರಾಜಭಟರ ಜೊತೆಗೆ ರಾಜಾಸ್ಥಾನಕ್ಕೆ ಹೊರಟ.